# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 687 (840) |
| ಸದಸ್ಯರ ಹೆಸರು | : | ಡಾ\|\| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15-12-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2019-20ನೇ ಸಾಲಿಗೆ ಎಸ್.ಎಫ್.ಸಿ ಅನುದಾನದಡಿಯಲ್ಲಿ ಪೌರಾಡಳಿತ ಇಲಾಖೆಗೆ ಬಿಡುಗಡೆಯಾಗಿರುವ ಮೊತ್ತ ಎಷ್ಟು;</td><td>2019-20ನೇ ಸಾಲಿನಲ್ಲಿ ಎಸ್.ಎಫ್.ಸಿ ಅನುದಾನದಡಿಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ಅನುದಾನ</th><th>ಹಂಚಿಕೆ</th><th>ಬಿಡುಗಡೆ</th></tr>
<tr><td>ಎಸ್.ಎಫ್.ಸಿ ಮುಕ್ತನಿಧಿ ಅನುದಾನ</td><td>57492.00</td><td>50192.19</td></tr>
<tr><td>ಎಸ್.ಎಫ್.ಸಿ ಕುಡಿಯುವ ನೀರುಅನುದಾನ</td><td>5428.00</td><td>5428.00</td></tr>
<tr><td>ಎಸ್.ಎಫ್.ಸಿ ವಿಶೇಷ ಅನುದಾನ</td><td>57365.00</td><td>12952.24</td></tr>
</table>
</td></tr>
<tr><td>(ಆ)</td><td>ಈ ಹಣವನ್ನು ಯಾವ ಮಾನದಂಡದ ಅಡಿಯಲ್ಲಿ ಎಲ್ಲಾ ಪಟ್ಟಣ ಪಂಚಾಯಿತಿ. ಪುರಸಭೆ. ನಗರಸಭೆಗಳಿಗೆ ಹಂಚಿಕೆ ಮಾಡಲಾಗಿದೆ;</td><td>➢ ಎಸ್.ಎಫ್.ಸಿ ಮುಕ್ತನಿಧಿ ಅನುದಾನ:-4ನೇ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವ ಮಾನದಂಡಗಳ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದಡಿಯಲ್ಲಿ ಅನುದಾನ ಹಂಚಿಕೆ ಮಾಡಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ 2011ರ ಜನಸಂಖ್ಯೆ, ಭೌಗೋಳಿಕ ವಿಸ್ತೀರ್ಣ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಮತ್ತು ಅನಕ್ಷರಸ್ಥರ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ/66/ಎಸ್‌ಎಫ್‌ಸಿ/2014 ದಿ: 26-05-2014ರಲ್ಲಿ ಆದೇಶಿಸಿರುವಂತ ಈ ಕೆಳಕಂಡ ಮಾನದಂಡದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ.<br><br>
• ಜನಸಂಖ್ಯೆ - 40%<br>
• ಭೌಗೋಳಿಕ ವಿಸ್ತೀರ್ಣ - 20%<br>
• ಪ.ಜಾತಿ/ಪ.ಪಂಗಡ ಜನಸಂಖ್ಯೆ - 20%<br>
• ಅನಕ್ಷರಸ್ಥರು - 20%<br>
ಒಟ್ಟು - 100%<br><br>
➢ <u>ಎಸ್.ಎಫ್.ಸಿ ಕುಡಿಯುವ ನೀರು ಅನುದಾನ:-</u> ಈ ಅನುದಾನವನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಅಗತ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರು ಮಾಡಲಾಗುತ್ತಿದೆ.<br><br>
➢ <u>ಎಸ್.ಎಫ್.ಸಿ ವಿಶೇಷ ಅನುದಾನ:-</u> ಈ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಯನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಲಾಗುತ್ತಿದೆ.</td></tr>
</table>

Scanned with CamScanner

| | | |
|---|---|---|
| (ಇ) | ಈ ಹಂಚಿಕೆಯಲ್ಲಿ, ಡಾ: ನಂಜುಂಡಪ್ಪ ವರದಿ ಅನ್ವಯ ಅತೀ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷವಾದ ಒತ್ತು ನೀಡಲಾಗಿದೆಯೇ? (ವಿವರಗಳನ್ನು ಒದಗಿಸುವುದು) | ಸರ್ಕಾರದಿಂದ ನಿಗಧಿಪಡಿಸಲಾಗಿರುವ ಮಾರ್ಗಸೂಚಿಗಳನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ ಹಾಗೂ ಎಸ್.ಎಫ್.ಸಿ ವಿಶೇಷ ಅನುದಾನಗಳನ್ನು ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತಿರುತ್ತದೆ. |

ಕಡತ ಸಂಖ್ಯೆ:ನಅಇ 425 ಎಸ್.ಎಫ್.ಸಿ 2020

**(ಡಾ|| ನಾರಾಯಣ ಗೌಡ)**
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು

Scanned with CamScanner